**CC No.694/2012**
**PW.8**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಸಿಸಿ ನಂ 694/2012**

| | |
|---|---|
| ಸಿ.ಡಬ್ಲ್ಯೂಃ **8** | ಪಿಡಬ್ಲ್ಯೂ **78** |
| ಸಾಕ್ಷಿದಾರರ ಹೆಸರು | ಗಂಗಪ್ಪ |
| ತಂದೆಯ ಹೆಸರು | ಲೇ ಸಿದ್ದರಾಮಯ್ಯ |
| ವಯಸ್ಸು | 61 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ಬೆಂಗಳೂರು |

**ದಿನಾಂಕಃ 2.9.2023. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ** ಮಾನ್ಯ ಸಹಾಯಕ ಅಭಿಯೋಜಕ **ರವರಿಂದ**

ಚಾಸಾ 1 ರಿಂದ 7 ಮತ್ತು 9 ರಿಂದ 11 ಗೊತ್ತು. ಆರೋಪಿ ಗೊತ್ತು. 7.11.2018 ರಂದು ಆರೋಪಿ 1 ರವರ ಜೊತೆ ಚಾಸಾ 1 ರವರನ್ನು ಮದುವೆ ಮಾಡಿಕೊಟ್ಟಿದ್ದು ನಂತರ ಮದುವೆ ಸಮಯದಲ್ಲಿ ಬ್ರಾಸ್ ಲೈಟು, ಉಂಗುರ, ಕೊರಳ ಚೈನು, ಅನ್ನು ಅರೋಪಿ 1 ರವರಿಗೆ ಕೊಟ್ಟಿರುತ್ತೇವೆ. ವರದಕ್ಷಿಣೆ ಮತ್ತು ಬಟ್ಟೆ ಖರ್ಚಿಗಾಗಿ ಆರೋಪಿ 1 ರವರಿಗೆ ಚಾಸಾ 2 ರವರು 50 ಸಾವಿರ ರೂ ಕೊಟ್ಟಿರುತ್ತಾರೆ. ಆರೋಪಿ 1 ರವರು ಚುನಾವಣೆ ನಿಂತಿದ್ದು ಮತ್ತು ಪಿ ಡಿ ಓ ಪರೀಕ್ಷೆ ತೆಗೆದುಕೊಂಡಿದ್ದು ಅದಕ್ಕೆ 20 ಲಕ್ಷ ಹಣ ಬೇಕೆಂದು ಕೇಳಿರುತ್ತಾರೆಂದು ಚಾಸಾ 2 ರವರು ನನಗೆ ಹೇಳಿರುತ್ತಾರೆ. ಚಾಸಾ 2 ರವರ ಬಳಿ ಆರೋಪಿ 3 ರವರು ಸೈಟು ಮಾರುತ್ತಿದ್ದಾರೆಂದು ನಾನು ನಿಮಗೆ ಮತ್ತೆ ಹಣ ಕೊಡುತ್ತೇನೆಂದು 5 ಲಕ್ಷ ರೂ ಗಳನ್ನು ಪಡೆದುಕೊಂಡಿರುತ್ತಾರೆ. ಎಲ್ಲಾ ಸೇರಿ 50 ಲಕ್ಷ ಬೇಕೆಂದು ಕೇಳಿರುತ್ತಾರೆಂದು ಚಾಸಾ 2 ರವರು ಹೇಳಿರುತ್ತಾರೆ. ಆರೋಪಿಗಳು ಚಾಸಾ 1 ರವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡುತ್ತಿದ್ದು ಆ ಕಾರಣಕ್ಕಾಗಿ ಚಾಸಾ 1 ರವರು ಆಸ್ಪತ್ರೆಗೆ ದಾಖಲಾಗಿರುತ್ತಾರೆ. ನಂತರ ಚಾಸಾ 1 ರವರನ್ನು ಲಾಯರ್ ಕಚೇರಿಗೆ ಕರೆದುಕೊಂಡು ಹೋಗಿ ವಿಚ್ಛೇದನ ಕೊಡುವಂತೆ ವಿಚ್ಛೇದನ ಪತ್ರಕ್ಕೆ ಸಹಿ ಮಾಡುವಂತೆ ಬೆದರಿಕೆ ಹಾಕಿರುತ್ತಾರೆ. ನಂತರ

ಆರೋಪಿ ವಿಚ್ಛೇದನ ನೋಟಿಸನ್ನು ಕಳುಹಿಸಿರುತ್ತಾರೆ. ಆರೋಪಿ 1 ರವರಿಗೆ ಆರೋಪಿ 2 ಮತ್ತು 3 ರವರು ಕುಮ್ಮಕ್ಕು ಕೊಡುತ್ತಿದ್ದರು ಎಂದು ಚಾಸಾ 2 ನನಗೆ ಹೇಳಿರುತ್ತಾರೆ.

ಆರೋಪಿ ಪರ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**

**<u>ಸಾಕ್ಷಿಯು ಉಳಿದ ಅಂಶಗಳನ್ನು ಹೇಳದೇ ಇರುವುದರಿಂದ ಈ ಸಮಯದಲ್ಲಿ ಮಾನ್ಯ ಸ.ಅ.ಅ.ರವರು ಸಾಕ್ಷಿ ಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.</u>**

ದಿನಾಂಕ 7.11.2008 ರಲ್ಲಿ ಆರೋಪಿ 1 ರವರ ಜೊತೆ ಚಾಸಾ 1 ರವರನ್ನು ಮದುವೆ ಮಾಡಿಕೊಟ್ಟಿದ್ದು ಮದುವೆಗೆ ನಾನು ಹೋಗಿದ್ದು ವರದಕ್ಷಿಣೆಗಾಗಿ 32 ಗ್ರಾಂ ಬ್ರಾಸ್ ಲೈಟು, 25 ಗ್ರಾಂ ಬಂಗಾರದ ಕೊರಳು ಚೈನು, 6 ಗ್ರಾಂ ಚಿನ್ನದ ಉಂಗುರ ಬಟ್ಟೆಗಳಿಗಾಗಿ 50 ಸಾವಿರ ನಗದು ಹಣವನ್ನು ಕೊಟ್ಟು ಎಲ್ಲಾ ಖರ್ಚುಗಳನ್ನು ಇಟ್ಟು ನಾವೇ ಮದುವೆ ಮಾಡಿಕೊಟ್ಟಿರುತ್ತೇವೆ. ಆರೋಪಿಗಳು ಚಾಸಾ 1 ರವರಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರೆಂದು ಚಾಸಾ 1 ರವರ ತಂದೆ ವಿಚಾರ ತಿಳಿಸಿದ್ದು, ಅವರ ಮನೆಗೆ ಬಂದು ತಿಳಿಸಿದಾಗ ಚಾಸಾ 1 ರವರ ತಂದೆ 5 ಲಕ್ಷ ರೂ ಗಳನ್ನು ಆರೋಪಿ 1 ರವರನ್ನು ಮನೆಗೆ ಕರೆಸಿ ಕೊಟ್ಟಿದ್ದರು ಎಂದು ತಿಳಿಯಿತು. ನಂತರ ಆರೋಪಿ 1 ರವರು ಚುನವಣೆಗೆ ನಿಂತು 15 ಲಕ್ಷ ಖರ್ಚುಮಾಡಿ ಸೋತಿದ್ದೇನೆ. ಮುಂದೆ ಚುನಾವಣೆಗೆ ನಿಂತಿದ್ದೇನೆ 25 ಲಕ್ಷ ಬೇಕು ಎಂದು ಹಾಗೂ ಪಿ ಡಿ ಓ ಪರೀಕ್ಷೆ ಬರೆದು ಕೆಲಸ ಸಿಗಲಿಲ್ಲ ಅದಕ್ಕಾಗಿ 20 ಲಕ್ಷ ಲಂಚ ಕೊಡಬೇಕೆಂದು ಎಲ್ಲಾ ಸೇರಿ 50 ಲಕ್ಷ ರೂ ಗಳನ್ನು ಚಾಸಾ 1 ರವರ ತಂದೆ ಮನೆಯಿಂದ ತೆಗೆದುಕೊಂಡು ಬರಬೇಕೆಂದು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ಚಾಸಾ 1 ರವರು ಇಷ್ಟೊಂದು ಹಣ ಎಲ್ಲಿಂದ ತಂದು ಕೊಡುವುದು ಎಂದು ಕೇಳಿದಾಗ ನಿಮ್ಮ

ತಂದೆಯವರು ಬೆಂಗಳೂರಿನಲ್ಲಿ ಕಟ್ಟಿರುವ ಮನೆಯನ್ನು ಮಾರಾಟ ಮಾಡಿಯಾದರು ಹಣ ತೆಗೆದುಕೊಂಡು ಬರಬೇಕೆಂದು ಬೈದು ಹಿಂಸೆ ನೀಡುತ್ತಿದ್ದು ಚಾಸಾ 1 ಅದಕ್ಕೆ ಒಪ್ಪದಿದ್ದಾಗ ಕೊರಳಿನಲ್ಲಿ ಇದ್ದ ಮಾಂಗಲ್ಯ ಸಮೇತವಾಗಿದ್ದ ಚಿನ್ನದ ಚೈನನ್ನು ಕಿತ್ತುಕೊಂಡು ಮನೆಯಿಂದ ಆಚೆ ಹಾಕಿರುತ್ತಾರೆಂದು ಚಾಸಾ 1 ರವರ ತಂದೆ ಮನೆಗೆ ಬಂದು ವಿಷಯ ತಿಳಿಸಿದಾಗ ಚಾಸಾ 1 ರವರ ತಂದೆ 5 ಲಕ್ಷ ರೂ ಗಳನ್ನು ಆರೋಪಿ 1 ರವರಿಗೆ ಕೊಟ್ಟಿರುತ್ತಾರೆಂದು ನನಗೆ ವಿಚಾರ ತಿಳಿಯಿತು. ಚಾಸಾ 1 ರವರ ತಂದೆ ತಾಯಿಯ ಹೆಸರಿನಲ್ಲಿ ಇರುವ ಆಸ್ತಿಯನ್ನು ಆರೋಪಿ 1 ರವರ ಹೆಸರಿಗೆ ಬರೆದುಕೊಂಡುವಂತೆ ಒತ್ತಾಯಿಸಿದರೆಂದು ಹಾಗೂ ಚಾಸಾ 1 ರವರು ಕೇಳುವುದಿಲ್ಲ ಎಂದು ಹೇಳಿದಾಗ ಕಾಲಿನಿಂದ ಒದ್ದು ಗಾಯಪಡಿಸಿದರು ಎಂದು ಆಸ್ತಿ ಹಣವನ್ನು ನನ್ನ ಹೆಸರಿಗೆ ಬರೆದುಕೊಡದಿದ್ದರೆ ಚಾಸಾ 1 ಮತ್ತು ಅವರ ಮನೆಯವರನ್ನು ಸಾಯಿಸುತ್ತೇನೆಂದು ಕೊಲೆ ಬೆದರಿಕೆ ಹಾಕಿಕಳುಹಿಸಿದ್ದು ಈ ವಿಚಾರದಲ್ಲಿ ಚಾಸಾ 1 ರವರ ತಂದೆ ಚಾಸಾ 8 ರಿಂದ 10 ಇವರುಗಳು ಸೇರಿ ನ್ಯಾಯಾ ಪಂಚಾಯಿತಿ ಮಾಡಿದರೂ ಸಹ ಆರೋಪಿ 1 ರವರು ಶಾಪಿಂಗ್ ಹೋಗಣ ಎಂದು ಹೇಳಿ ವಕೀಲರ ಕಚೇರಿಗೆ ಕರೆದುಕೊಂಡು ಹೋಗಿ ವಿಚ್ಚೇದನ ಪತ್ರಕ್ಕೆ ಸಹಿ ಮಾಡು ಎಂದು ಬೆದರಿಕೆ ಹಾಕಿರುತ್ತಾರೆ ಎನ್ನುವ ವಿಚಾರ ಚಾಸಾ 1 ರವರ ತಂದೆಯವರಿಂದ ನನಗೆ ತಿಳಿಯಿತು ಎಂದರೆ ಸರಿ.

ಆರೋಪಿ ಪರ ವಕೀಲರು ಹಾಜರಿದ್ದು ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**

**<u>ಸಾಕ್ಷಿಯು ಉಳಿದ ಅಂಶಗಳನ್ನು ಹೇಳದೇ ಇರುವುದರಿಂದ ಈ ಸಮಯದಲ್ಲಿ ಮಾನ್ಯ ಸ.ಅ.ಅ.ರವರು ಸಾಕ್ಷಿ ಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.</u>**

ನನ್ನ ಅಜ್ಜಿ ಶಾರದಮ್ಮ ಈಗ್ಗೆ 4 ವರ್ಷಗಳ ಹಿಂದೆ ಅವರ ಸ್ವಂತ ಜಾಗದಲ್ಲಿ ಶಾಲೆ ಕಟ್ಟಡವನ್ನು ಕಟ್ಟಿ ಶಾಲೆಯನ್ನು ನಡೆಸುತ್ತಿರುತ್ತಾರೆ. ಮಕ್ಕಳ ಸಂಖ್ಯೆ ಜಾಸ್ತಿಯಾದ ಕಾರಣ ಕಟ್ಟಡದ ಮೊದಲನೇ ಹಂತದ ಕಟ್ಟಡ ಕಟ್ಟಿಸುತ್ತಿದ್ದಾಗ ಪ್ರಕಾಶ್ ಇಂಜಿನಿಯರ್ ರವರು ಗೋವಿಂದಪ್ಪ ಎಂಬ ಮೇಸ್ತ್ರಿ ಕಡೆಯಿಂದ ಕೆಲಸ ಮಾಡಿಸುತ್ತಿದ್ದಾಗ ಅರೋಪಿ ಮತ್ತು ಅವರ ಮನೆಯವರು ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ ದಿನದಿಂದಲೂ ಯಾವುದಾದರು ಒಂದು ವಿಷಯದಲ್ಲಿ ನಮಗೆ ತೊಂದರೆ ಮಾಡುತ್ತಿರುತ್ತಾರೆ. ದಿನಾಂಕ 17.5.2014 ರಂದು ಸಂಜೆ 6 ಗಂಟೆ ಸಮಯದಲ್ಲಿ ಆರೋಪಿಗಳು ಬಂದು ಇಂಜಿನಿಯರ್ ಬಳಿ ಜಗಳ ಮಾಡುತ್ತಿದ್ದು ಚಾಸಾ 3 ರವರು ಸೀಮೆಂಟ್ ಕೆಲಸ ಮಾಡುವಾಗ

ಸೀಮೆಂಟ್ ಕೆಳಗ ಬೀಳದೆ ಕೆಲಸ ಮಾಡುಲು ಸಾಧ್ಯವಿಲ್ಲ ಕೊನೆಯಲ್ಲಿ ಸ್ವಚ್ಚ ಗೊಳಿಸುತ್ತೆವೆಂದು ಹೇಳಿದ್ದರು ಅವ್ಯಾಚ ಶಬ್ದಗಳಿಂದ ಬೈದು ಬೆದರಿಕೆ ಹಾಕಿರುತ್ತಾರೆ. ಜಗಳ ಬಿಡಿಸಲು ಹೋದ ನನಗೆ ಆರೋಪಿ 1 ರವರು ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿಗಳೆಲ್ಲರೂ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ.

END

**ಈ ಸಮಯದಲ್ಲಿ ಮಾನ್ಯ ಸ. ಸ. ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.**

**ಈ ಸಮಯದಲ್ಲಿ ಮಾನ್ಯ ಸ. ಸ. ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.**

**CC No.694/2012**
**PW.8**

ಆರೋಪಿ ಪರ ವಕೀಲರು ಹಾಜರು ಇದ್ದು ಪಾಟಿಸವಾಲಿಗೆ ಕಾಲಾವಕಾಶ ಕೋರಿದ್ದು ರೂ. 200 ರೂ ಖರ್ಚುಗಳೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,
ದೊಡ್ಡಬಳ್ಳಾಪುರ .

**ad absetn. EP filed . CW 1 present. And examined as pw 1. got marked eX.P1 to 3. prayer of APP to issue w/s to cw 2 to 5 is rejected. Cw 1 complainant as not stated anything about accused. Hence issuing w/s to cw 2 to 5 is not necessary . Hence they are dropped. 313 statement is dispensed at the counsel for accused . For complaince u/s. 437A of cr.pc. For judgment.**

**26.7.2023**